ದಿನಾಂಕ ಃ 03.02.2023 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದು ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಟಿ ಎಸ್ ಕೆ ವಕೀಲರಿಂದ,

ಕೃಷ್ಣ ಸಿಂಗ್ ರವರು ಈ ದಾವೆಯ ಪಕ್ಷಗಾರಲ್ಲ ಎಂದರೆ ನಿಜ. ಆದರೆ ಅವರು ರಈ ದಾವೆಗೆ ಸಂಬಂಧಿಪಟ್ಟಿದ್ದಾರೆ ಎನ್ನುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಿಪಿ- 62 ರಿಂದ 67 ರಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೃಷ್ಣ ಸಿಂಗ್ ರವರ ಸಾಲ ಮಾಡಿದ್ದು ಅವರಿಗೆ ಒಂದು ಚೆಕ್‌ನ್ನು ಬರೆದುಕೊಟ್ಟಿದ್ದು ಅದಕ್ಕೆ ಸಂಬಂಧಿಸಿದಂತೆ ನಾನು ಹಾಜರು ಮಾಡಿರುವ ದಾಖಲೆಗಳ ಪ್ರಕಾರ ಅವರು ಪ್ರಕರಣವನ್ನು ದಾಖಲು ಮಾಡಿದ್ದರೆ ಎಂದರೆ ಸಾಕ್ಷಿ ನಾನು ಅವರಿಗೆ ಯಾವುದೇ ಚೆಕ್ ಕೊಟ್ಟಿರುವುದಿಲ್ಲ ಎನ್ನುತ್ತಾರೆ. ನಿಪಿ-62 ರಿಂದ 67 ರಲ್ಲಿ ದಾವಾ ಸ್ವತ್ಸಿಗೆ ಸಂಬಂಧಿಸಿದಂತೆ ದಾವಾ ಸ್ವತ್ತಿನ ಅಳತೆ, ಸರ್ವೆ ನಂಬರ್ ಅಥವಾ ಡೋರ್ ನಂಬರ್ ನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಕೃಷ್ಣ ಸಿಂಗ್ ರವರ ನಡುವೆ ಸಾಲದ ವ್ಯವಹಾರಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾನು ಚೆಕ್ ನ್ನು 4 ನೇ ಪ್ರತಿವಾದಿಗೆ ಕೊಟ್ಟಿದ್ದು ಅವರು ಕೃಷ್ಣಸಿಂಗ್ ರವರ ಮುಖಾಂತರ ಕೇಸ್ ನ್ನು ದಾಖಲು ಮಾಡಿಸಿದ್ದಾರೆ ಎನ್ನುತ್ತಾರೆ. ನಿಪಿ- 62 ರಿಂದ 67 ರಲ್ಲಿ ಆ ರೀತಿ ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ- 62 ರಿಂದ 67 ಕ್ಕೂ ಈ ದಾವೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

***( 1** ಮತ್ತು **4** ನೇ ಪ್ರತಿವಾದಿ ಪರ ಶ್ರೀ ವಿ.ಬಿ.ಪಿ ವಕೀಲರು ಹಾಗೂ **3** ನೇ ಪ್ರತಿವಾದಿ ಪರ ಶ್ರೀ ಡಿ.ಎನ್.ಜೆ ವಕೀಲರು **2** ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)*

ಮರುವಿಚಾರಣೆ ಃ ಇರುವುದಿಲ್ಲ.

**( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.